**ಓ.ಎಸ್.ನಂ. 2/2019 ಪಿ.ಡಬ್ಲ್ಯೂ: 2**

ದಿನಾಂಕಃ **15.11.2024** ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

ಪಾಟೀ ಸವಾಲು **: 2** ನೇ ಪ್ರತಿವಾದಿಯ ಪರ ಶ್ರೀ ಆರ್.ಹೆಚ್. ವಕೀಲರಿಂದಃ

02. ಬಿ. ಕೆ. ಪೊಲೀಸ್ ಪಾಟೀಲ್ ನನ್ನ ತಂದೆ ಎಂದರೆ ಸರಿ. ನನ್ನ ತಂದೆಯು ಅವರ ಜೀವಿತಾವಧಿಯಲ್ಲಿ ಯಾವ ಯಾವ ದಾಖಲೆಗಳ ಮೇಲೆ ಸಹಿಗಳನ್ನು ಮಾಡಿದ್ದರು ಎಂಬ ಬಗ್ಗೆ ನನಗೆ ಖುದ್ದಾಗಿ ಮಾಹಿತಿ ಇದೆಯೇ? ಎಂದರೆ ಇರುವುದಿಲ್ಲ. ನನ್ನ ತಂದೆಯು ಸಹಿ ಮಾಡಿದ ಬೇರೆ ದಸ್ತಾವೇಜುಗಳಲ್ಲಿನ ಸಹಿಗಳನ್ನು ನಾನು ಹಾಜರು ಮಾಡಿಲ್ಲ ಎಂದರೆ ಸರಿ. ನನಗೆ ಈ ದಾವೆಯಲ್ಲಿ ಸಾಕ್ಷಿ ಹೇಳುವಂತೆ ಕೋರ್ಟಿನಿಂದ ಸಮನ್ಸ್ ಬಂದಿರಲಿಲ್ಲ ಎಂದರೆ ಸರಿ. ನನಗೆ ದಾವೆಯಲ್ಲಿ ಹಾಜರಾಗಿ ಸಾಕ್ಷಿ ಹೇಳುವಂತೆ ಯಾರು ಕರೆದರು ಎಂದರೆ ಶ್ರೀ ವಸಂತ್ ವಕೀಲರು ಕರೆದಿದ್ದರು. ನಾನು ನೇರವಾಗಿ ಕೋರ್ಟಿಗೆ ಬಂದು ರೆಡಿಯಾಗಿದ್ದ ಪ್ರಮಾಣ ಪತ್ರಕ್ಕೆ ಸಹಿ ಮಾಡಿದ್ದೆ ಎಂದರೆ ಸರಿ . ನಿಪಿ20(ಎ) ಮತ್ತು ನಿಪಿ20(ಬಿ) ಪ್ರಕಾರ ಇರುವ ಸಹಿಗಳು ನನ್ನ ತಂದೆಯ ಸಹಿಗಳಂತೆ ಕಾಣುತ್ತವೆ ಎಂಬ ಬಗ್ಗೆ ಸಾಕ್ಷಿ ಹೇಳಲು ಬಂದಿದ್ದೇನೆಯೇ ವಿನಾಃ ಸದರಿ ಸಹಿಗಳನ್ನು ನನ್ನ ತಂದೆಯೇ ಮಾಡಿದ್ದಾರೆ ಎಂಬ ಬಗ್ಗೆ ನನಗೆ ಖುದ್ದು ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ಈ ಸಹಿಯನ್ನು ನನ್ನ ತಂದೆ ಯಾವ ಇಸವಿಯಲ್ಲಿ ಯಾವ ತಾರೀಖಿನಲ್ಲಿ ಮಾಡಿದ್ದರು ಎಂದು ನನಗೆ ಗೊತ್ತಿದೆಯೇ? ಎಂದರೆ ಗೊತ್ತಿಲ್ಲ.

03. ನನಗೆ ಸುಮಿತ್ರಮ್ಮ ಮತ್ತು ಆಕೆಯ ಮಕ್ಕಳಾದ ವಾದಿಗಳು ಚೆನ್ನಾಗಿ ಪರಿಚಯಸ್ಥರು ಎಂದರೆ ಸರಿ. ಅವರು ತೋರಿಸಿದ ದಾಖಲೆ ಮೇಲೆ ಸಾಕ್ಷಿ ಹೇಳಲು ಬಂದಿದ್ದೇನೆಯೇ ವಿನಾಃ ನನಗೆ ವೈಯಕ್ತಿಕ ಮಾಹಿತಿ ಇಲ್ಲ ಎಂದರೆ ಸರಿ.

***(**ಮುಂದುವರೆದ ಪಾಟೀಸವಾಲಿಗೆ ಸಮಯ ಕೋರಿದ್ದರಿಂದ ಮುಂದೂಡಿತು***)***

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ).

**ಓ.ಹೇ.ಕೇ. ಸರಿ ಇದೆ.**

ಹಿರಿಯ ಸಿವಿಲ್ ನ್ಯಾಯಾಧೀಶರು
ಹೂವಿನ ಹಡಗಲಿ.

ದಿನಾಂಕಃ **15.11.2024** ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

ಪಾಟೀ ಸವಾಲು **: 2** ನೇ ಪ್ರತಿವಾದಿಯ ಪರ ಶ್ರೀ ಆರ್.ಹೆಚ್. ವಕೀಲರಿಂದಃ

02. ನನಗೆ ಕನ್ನಡ ಓದಲು ಬರೆಯಲು ಬರುತ್ತದೆ ಎಂದರೆ ಸರಿ. ಈ ದಾವೆಯನ್ನು ನನ್ನ ತಂದೆ ನಮ್ಮ ಹೆಸರಿಗೆ ವಿಲ್ ಬರೆದುಕೊಟ್ಟಿರುವ ಕಾರಣ ಆಸ್ತಿ ನಮ್ಮ ಹೆಸರಿಗೆ ಮಾಡಿಸಿಕೊಳ್ಳಲು ಸಲ್ಲಿಸಿದ್ದೇವೆ. ನನ್ನ ತಂದೆ ಪರಶೆಟ್ಟಿ ವೀರಪ್ಪ ಇರುತ್ತಾರೆ. ಪರಶೆಟ್ಟಿ ವೀರಪ್ಪ ಇವರ ಹೆಂಡತಿ ಕಾಳಮ್ಮ ಎಂದರೆ ಮೊದಲನೇ ಹೆಂಡತಿ ಕಾಳಮ್ಮ, ಎರಡನೇ ಹೆಂಡತಿ ಸುಮಿತ್ರಮ್ಮ ಆಗಿರುತ್ತಾರೆ ನಾವು ವೀರಪ್ಪನ ವಾರಸುದಾರರು ಎಂಬ ಬಗ್ಗೆ ದಾಖಲೆಗಳನ್ನು ಹಾಜರು ಮಾಡಿದ್ದೇವೆ. ನಮ್ಮ ವಾರಸುದಾರಿಕೆಯನ್ನು ತೋರಿಸಲು ವಿಲ್ ಮತ್ತು ಮನೆಯ ದಾಖಲೆಗಳನ್ನು ಹಾಜರುಮಾಡಿದ್ದು, ಈ ದಾಖಲೆಗಳನ್ನು ಬಿಟ್ಟು ಬೇರೆ ದಾಖಲೆಗಳು ಇಲ್ಲವೇ? ಎಂದರೆ ಇಲ್ಲ. ಪರಶೆಟ್ಟಿ ವೀರಪ್ಪನ ವಾರಸುದಾರರು ನಾವು ಎಂಬ ಬಗ್ಗೆ ಅವರ ವಂಶವೃಕ್ಷದ ಇತ್ಯರ್ಥವನ್ನು ಇದುವರೆಗೆ ಯಾವುದೇ ನ್ಯಾಯಾಲಯ ಇತ್ಯರ್ಥ ಮಾಡಿಲ್ಲ ಎಂದರೆ ಸರಿ. ನಾವು ಪರಶೆಟ್ಟಿ ವೀರಪ್ಪ ಮತ್ತು ಕಾಳಮ್ಮನ ವಾರಸುದಾರರು ಎಂದು ಇದೇ ದಾವೆಯಲ್ಲಿ ಮಧ್ಯಂತರ ಅರ್ಜಿ ಸಂ. 11 ರಿಂದ 13 ನ್ನು ನಾವು ಸಲ್ಲಿಸಿದ್ದೆವು ಎಂದರೆ ಸರಿ. ಸದರಿ ಅರ್ಜಿಗಳ ಮೇಲೆ ನಮ್ಮ ಸಾಕ್ಷಿ ವಿಚಾರಣೆ ನಡೆದಿದೆ ಎಂದರೆ ಸರಿ. ಮಧ್ಯಂತರ ಅರ್ಜಿ ಸಂ.11 ರಿಂದ 13 ರಲ್ಲಿ ವಿಚಾರಣೆ ಮಾಡಿದ ಪಿ.ಡಬ್ಲ್ಯೂ1 ರವರ ಪ್ರಮಾಣ ಪತ್ರ ಮತ್ತು ಪಾಟೀಸವಾಲನ್ನು ನಿಡಿ**1** ಎಂದು ಗುರುತಿಸಿತು.

03. ಪರಶೆಟ್ಟಿ ವೀರಪ್ಪನ ತಂದೆಯ ಹೆಸರು ವೀರಭದ್ರಪ್ಪ. ವೀರಭದ್ರಪ್ಪನ ಹೆಂಡತಿ ಹೆಸರು ಬಡಕಮ್ಮ @ ಬಸಮ್ಮ ಇರುತ್ತದೆ. ವೀರಭದ್ರಪ್ಪ ಮತ್ತು ಆತನ ಹೆಂಡತಿ ಇಬ್ಬರೂ ಈಗ ಮೃತಪಟ್ಟಿದ್ದಾರೆ ಎಂದರೆ ಸರಿ. ಸದರಿ ವೀರಭದ್ರಪ್ಪನಿಗೆ 5 ಜನ ಹೆಣ್ಣುಮಕ್ಕಳು ಮತ್ತು ಇಬ್ಬರು ಗಂಡುಮಕ್ಕಳು ಇದ್ದರು. ಅವರ ಹೆಸರುಗಳು ಗುರುಶಾಂತಮ್ಮ, ಕಾಳಮ್ಮ, ಗಂಗಮ್ಮ, ಇನ್ನಿಬ್ಬರ ಹೆಸರು ನೆನಪಿಲ್ಲ, ವೀರಪ್ಪ ಮತ್ತು ವಿರುಪಾಕ್ಷಪ್ಪ. ವೀರಭದ್ರಪ್ಪನ 7 ಜನ ಮಕ್ಕಳಲ್ಲಿ ಇದುವರೆಗೆ ಕುಟುಂಬದ ಆಸ್ತಿಗಳ ಪಾಲುವಿಭಾಗ ನಡೆದಿಲ್ಲ ಎಂದರೆ ಸರಿ. ವೀರಭದ್ರಪ್ಪನ ಗಂಡುಮಕ್ಕಳ ಪೈಕಿ ವೀರಪ್ಪನೇ ಹಿರಿಯ ಮಗ ಮತ್ತು ಮನೆಯ ಯಜಮಾನಿಕೆ ಮಾಡುತ್ತಿದ್ದರು ಎಂದರೆ ಸರಿ. ಅವರ ಕುಟುಂಬದಲ್ಲಿ ವೀರಪ್ಪ ಮತ್ತು ವಿರುಪಾಕ್ಷಪ್ಪನಿಗೆ ಕೃಷಿ ಕೆಲಸ ಬಿಟ್ಟು ಬೇರೆ ಕಸುಬು ಇರಲಿಲ್ಲ ಎಂದರೆ ಸರಿ. ವೀರಪ್ಪನಿಗೆ ಜಮೀನಿನಿಂದ ಬರುವ ಆದಾಯದಿಂದಲೇ ಏನಾದರೂ ಆಸ್ತಿ ಖರೀದಿ ಮಾಡುತ್ತಿದ್ದರು ಎಂದರೆ ಸರಿ. ಅವರ ಕುಟುಂಬದ 4 ಎಕರೆ ಜಮೀನನ್ನು ದಿನಾಂಕ 28.09.1973 ರಲ್ಲಿ ಭೂಸ್ವಾಧೀನಪಡಿಸಿಕೊಳ್ಳಲಾಗಿತ್ತು ಎಂದರೆ ಸರಿ. ಸದರಿ ಭೂಸ್ವಾಧೀನದಿಂದ ಬಂದ ಪರಿಹಾರದ ಹಣವು ಅವರ ಮನೆತನಕ್ಕೆ ಬಂದ ಹಣ ಎಂದರೆ ಸರಿ. ನಿಪಿ4 ಮತ್ತು ನಿಪಿ5 ಕ್ರಯ ಪತ್ರಗಳನ್ನು ನಾನೇ ಹಾಜರು ಮಾಡಿದ್ದೇನೆ ಎಂದರೆ ಸರಿ.

ಈ ಎರಡೂ ಕ್ರಯ ಪತ್ರಗಳು ವೀರಪ್ಪನ ಹೆಸರಿನಲ್ಲಿ 1974 ರಲ್ಲಿ ಇದ್ದ ಕ್ರಯ ಪತ್ರಗಳು ಎಂದರೆ ಸರಿ. ವೀರಪ್ಪನು 1974 ರಲ್ಲಿ ಆಸ್ತಿಗಳನ್ನು ಖರೀದಿ ಮಾಡಲು ಆತನಿಗೆ 1973 ರಲ್ಲಿ ಬಂದ ಭೂಸ್ವಾಧೀನದ ಪರಿಹಾರದ ಹಣ ಮತ್ತು ಕುಟುಂಬದ ಜಮೀನಿನಿಂದ ಬಂದ ಆದಾಯ ಮಾತ್ರ ಇತ್ತು ಎಂದರೆ ಅದರ ಬಗ್ಗೆ ನನಗೆ ಗೊತ್ತಿಲ್ಲ. 1974 ರಲ್ಲಿ ವೀರಪ್ಪನಿಗೆ ಮೇಲೆ ಹೇಳಿದ ಎರಡು ಆದಾಯಗಳನ್ನು ಹೊರತುಪಡಿಸಿ ಬೇರೆ ಆದಾಯ ಇತ್ತು ಎಂಬ ಬಗ್ಗೆ ನಮ್ಮ ಬಳಿ ದಾಖಲೆಗಳು ಇರುತ್ತವೇಯೇ? ಎಂದರೆ ಇರುವುದಿಲ್ಲ. ಆದ್ದರಿಂದ ನಿಪಿ4 ಮತ್ತು ನಿಪಿ5 ರಲ್ಲಿರುವ ಆಸ್ತಿಗಳನ್ನು ವೀರಪ್ಪನು ತನ್ನ ಒಟ್ಟು ಕುಟುಂಬದ ಆದಾಯದಿಂದಲೇ ಖರೀದಿ ಮಾಡಿದ್ದರು ಎಂಬ ಬಗ್ಗೆ ನಮಗೆ ಈ ದಾವೆ ಹಾಕುವಾಗಲೇ ಗೊತ್ತಿತ್ತು ಎಂದರೆ ಸರಿಯಲ್ಲ. ಕುಟುಂಬದ ಜಮೀನಿನ ಆದಾಯ ಮತ್ತು ಭೂಸ್ವಾಧೀನದ ಪರಿಹಾರದ ಹಣ ಬಿಟ್ಟರೆ ವೀರಪ್ಪನಿಗೆ ಬೇರೆ ಆದಾಯ ಯಾವುದೂ ಇರಲಿಲ್ಲವೆಂದು ನಮಗೆ ಯಾವಾಗ ಗೊತ್ತಾಯಿತು? ಎಂದರೆ ನಮ್ಮ ತಂದೆಗೆ ನಮ್ಮ ಮನೆಯಲ್ಲಿ ಹೈನುಗಾರಿಕೆ ಮಾಡುತ್ತಿದ್ದ ಆದಾಯ ಇತ್ತು, ಅದೇ ಹಣ ಮತ್ತು ನನ್ನ ತಾಯಿಯ ಬಂಗಾರದ ಆಭರಣಗಳನ್ನು ಅಡವವಿಟ್ಟು ನಿಪಿ4 ಮತ್ತು ನಿಪಿ5 ರಲ್ಲಿರುವ ಆಸ್ತಿಗಳನ್ನು ಖರೀದಿ ಮಾಡಿದ್ದೇನೆ ಎಂದು ನಮ್ಮ ತಂದೆ ಯಾವಾಗಲೂ ಹೇಳುತ್ತಿದ್ದರು. ನಿಡಿ1 ರಲ್ಲಿ ಗುರುತಿಸಲಾದ ಸಾಕ್ಷಿ ಹೇಳಿಕೆಯಲ್ಲಿ ನಾನು ಈಗಾಗಲೇ ವೀರಪ್ಪ ವಾರ್ಡ ನಂ. **4** ರಲ್ಲಿ ಮತ್ತು ನಮ್ಮ ತಾಯಿ ಸುಮಿತ್ರಮ್ಮ ಹಾಗೂ ವಾದಿಗಳಾದ ನಾವು ವಾರ್ಡ ನಂ.**7** ರಲ್ಲಿ ವಾಸ ಮಾಡುತ್ತಿದ್ದೆವು ಎಂದು ಹೇಳಿದ್ದೇನೆ ಎಂದರೆ ಸರಿ. ನಮ್ಮ ವಾದ ಪತ್ರದಲ್ಲಾಗಲೀ ಅಥವಾ ಸಾಕ್ಷಿ ಪ್ರಮಾಣ ಪತ್ರದಲ್ಲಾಗಲೀ ಹೈನುಗಾರಿಕೆಯಿಂದ ಬಂದ ಆದಾಯ ಮತ್ತು ನನ್ನ ತಾಯಿಯ ಆಭರಣಗಳನ್ನು ಅಡವಿಟ್ಟು ಈ ಆಸ್ತಿಗಳನ್ನು ಖರೀದಿಸಲಾಗಿದೆ ಎಂದು ಬರೆಯಿಸಿಲ್ಲ ಎಂದರೆ ವಾದ ಪತ್ರದಲ್ಲಿ ಹೈನುಗಾರಿಕೆಯಿಂದ ಬಂದ ಆದಾಯದ ಬಗ್ಗೆ ಬರೆಸಿದ್ದೇವೆ. ಸಾಕ್ಷಿಗೆ ವಾದ ಪತ್ರ ಮತ್ತು ಸಾಕ್ಷಿ ಪ್ರಮಾಣ ಪತ್ರದಲ್ಲಿ ಹೈನುಗಾರಿಕೆಯಿಂದ ಬಂದ ಆದಾಯದಿಂದ ವೀರಪ್ಪನು ದಾವಾ ಆಸ್ತಿಗಳನ್ನು ಖರೀದಿ ಮಾಡಿದ ಬಗ್ಗೆ ಉಲ್ಲೇಖ ಮಾಡಿಲ್ಲವೆಂದು ಓದಿ ತಿಳಿಸಿದ ನಂತರ ಸಾಕ್ಷಿಯು ಹೈನುಗಾರಿಕೆ ಆದಾಯದ ಬಗ್ಗೆ ಬರೆಯಲು ನಮ್ಮ ವಕೀಲರಿಗೆ ಹೇಳಿದ್ದೆವು ಎಂದು ಉತ್ತರಿಸಿದ್ದಾರೆ.

04. ನನ್ನ ಪ್ರಕಾರ ವೀರಪ್ಪನ ಜೊತೆಯಲ್ಲಿ ಸುಮಿತ್ರಮ್ಮನ ಮದುವೆಯಾಗಿ 40 ವರ್ಷಗಳು ಕಳೆದಿರುತ್ತವೆ. 1974 ನೇ ಇಸವಿಯಲ್ಲಿ ವೀರಪ್ಪ ಮತ್ತು ಸುಮಿತ್ರಮ್ಮನಿಗೆ ಮದುವೆಯಾಗಿತ್ತು ಎಂಬ ರುಜುವಾತಿಗೆ ನಮ್ಮ ಬಳಿ ದಾಖಲೆಗಳು ಇರುತ್ತವೆಯೇ? ಎಂದರೆ ಇರುವುದಿಲ್ಲ. ನಾವು ಹೈನುಗಾರಿಕೆ ಮಾಡಲು ನನ್ನ ಅಣ್ಣನಿಗೆ 10 ವರ್ಷ ವಯಸ್ಸಿದ್ದಾಗ ಪ್ರಾರಂಭ ಮಾಡಿದ್ದೆವು. ನನ್ನ ಅಣ್ಣನಿಗೆ ಈಗ 50 ವರ್ಷ ಇರುತ್ತದೆ. ನನ್ನ ಅಣ್ಣ 10 ವರ್ಷ ವಯಸ್ಸು ಇರುವಾಗಲೇ ಹೈನುಗಾರಿಕೆ ಮಾಡುತ್ತಿದ್ದ ಎಂಬ ಬಗ್ಗೆ ದಾಖಲೆಗಳು ಇರುತ್ತವೆಯೇ? ಎಂದರೆ ಇರುವುದಿಲ್ಲ. ಸದರಿ ಸಮಯದಲ್ಲಿ ನಮ್ಮ ಬಳಿ ಹೈನುಗಾರಿಕೆಯಿಂದ ಬಂದ ಆದಾಯದ ಹಣವಿತ್ತು ಎಂಬ ಬಗ್ಗೆ ತೋರಿಸುವ ದಾಖಲೆಗಳು

ಇರುತ್ತವೆಯೇ? ಎಂದರೆ ಇರುವುದಿಲ್ಲ. ನಮಗೆ ಯಾವುದೇ ಹೈನುಗಾರಿಕೆ ಆದಾಯ ಇರಲಿಲ್ಲ ಮತ್ತು ಅಂತಹ ಆದಾಯವನ್ನು ವೀರಪ್ಪನಿಗೆ ಕೊಟ್ಟಿರಲಿಲ್ಲ ಎಂದು ಗೊತ್ತಿದ್ದರೂ ಪಾಟೀಸವಾಲಿನಲ್ಲಿ ಕಲ್ಲಿಸಿಕೊಂಡು ಹೈನುಗಾರಿಕೆ ಆದಾಯದ ಬಗ್ಗೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ4 ಮತ್ತು ನಿಪಿ5 ಕ್ರಯ ಪತ್ರಗಳಲ್ಲಿ ಇರುವ ಒಂದು ಆಸ್ತಿ ಈ ದಾವೆಯಲ್ಲಿನ ದಾವಾ ಸ್ವತ್ತು ಎಂದರೆ ಸರಿ. ಈ ದಾವೆ ಹಾಕುವಾಗಲೇ ನಮಗೆ ಈ ದಾವಾ ಸ್ವತ್ತನ್ನು ವೀರಪ್ಪ ಒಟ್ಟು ಕುಟುಂಬದ ಆಸ್ತಿಯ ಆದಾಯದಿಂದ ಖರೀದಿ ಮಾಡಿದ್ದರೆಂದು ಗೊತ್ತಿತ್ತು ಎಂದರೆ ಇಲ್ಲ, ನಮ್ಮ ತಂದೆ ಅದನ್ನು ವ್ಯಾಪಾರದಿಂದ ಬಂದ ಹಣದಿಂದ ಖರೀದಿ ಮಾಡಿದ್ದಾರೆ. ದಾವಾ ಸ್ವತ್ತು ಒಟ್ಟು ಕುಟುಂಬದ ಆಸ್ತಿ ಎಂದು ಗೊತ್ತಿದ್ದರೂ ನಾವು ವೀರಪ್ಪನ ಉಳಿದ ಸಹೋದರ ಸಹೋದರಿಯರನ್ನು ದಾವೆಗೆ ಪಕ್ಷಕಾರರಾಗಿ ಮಾಡಿಲ್ಲ ಎಂದರೆ ಉಳಿದ ಸಹೋದರ ಸಹೋದರಿಯರನ್ನು ದಾವೆಗೆ ಸೇರಿಸಿಲ್ಲ ಎಂಬುದು ನಿಜ. ಆದ್ದರಿಂದ ಎಲ್ಲಾ ಕುಟುಂಬದ ಸದಸ್ಯರನ್ನು ದಾವೆಗೆ ಸೇರಿಸದೇ ನಾವು ಕೋರಿದ ಘೋಷಣಾತ್ಮಕ ಪರಿಹಾರವನ್ನು ಪಡೆಯಲು ನಾವು ಅರ್ಹರಲ್ಲ ಎಂದರೆ ಅವರನ್ನು ಪಕ್ಷಕಾರರನ್ನಾಗಿ ಮಾಡುತ್ತೇನೆ.

*(*ಮುಂದುವರೆದ ಪಾಟೀಸವಾಲಿಗೆ ಸಮಯ ಕೋರಿದ್ದರಿಂದ ಮುಂದೂಡಿತು*)*

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ).

ಓ.ಹೇ.ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಹೂವಿನ ಹಡಗಲಿ.